157ಶೆ6 = (115)
4RR
050126

# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಮಧು ಜಿ ಮಾದೇಗೌಡ ಇವರು ನಿಯಮ 72ರ ಮೇರೆಗೆ ಮಂಡಿಸಿರುವ ಗಮನ ಸಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

***

**ವಿಷಯ:** ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 30 ಗ್ರಾಪಂಸಿ 2008, ದಿನಾಂಕ:31.10.2008ರಲ್ಲಿ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ದಿನಾಂಕ:01.11.2008 ರಿಂದ ಅನ್ವಯವಾಗುವಂತೆ ಜಾರಿಗೆ ತರಲಾಗಿರುತ್ತದೆ. ಈ ಆದೇಶದ ಪ್ರಕಾರ, ಸಂಬಂಧಿಸಿದ ಗ್ರಾಮ ಪಂಚಾಯಿತಿ ಸಿಬ್ಬಂದಿ ತಾವು ಪಡೆಯುತ್ತಿರುವ ಕನಿಷ್ಠ ವೇತನ ಹಾಗೂ ತುಟ್ಟಿಭತ್ಯೆಯ ಶೇ 10ರಷ್ಟು ವಂತಿಕೆಯನ್ನು ಪ್ರತಿ ತಿಂಗಳು ಪಾವತಿ ಮಾಡತಕ್ಕದ್ದು, ಹಾಗೂ, ಸಂಬಂಧಿಸಿದ ಗ್ರಾಮ ಪಂಚಾಯಿತಿಗಳ employer contribution ಆಗಿ ಪ್ರತಿ ತಿಂಗಳು ನೌಕರರು ವಂತಿಗಗೆ ಸಮನಾದ ಅಂದರೆ ಶೇಕಡಾ 10ರಷ್ಟು ವಂತಿಕೆಯನ್ನು ಪಾವತಿಸಬೇಕಿರುತ್ತದೆ. ಆದರೆ, ಮಂಡ್ಯ, ಮೈಸೂರು, ಹಾಸನ ಸೇರಿದಂತೆ ರಾಜ್ಯದಲ್ಲಿನ ಯಾವುದೇ ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ನೀಡಲಾಗುತ್ತಿಲ್ಲ. ಯೋಜನೆ ಜಾರಿಗೆ ತಂದು 17 ವರ್ಷಗಳೇ ಕಳೆದರೂ ಇನ್ನೂ ಜಾರಿಯಾಗಿಲ್ಲ. ಇದರಿಂದ ಸಾವಿರಾರು ಗ್ರಾಮ ಪಂಚಾಯಿತಿ ಸಿಬ್ಬಂದಿಗಳನ್ನು ಈ ಸೌಲಭ್ಯದಿಂದ ಹೊರಗಿಡಲಾಗಿದೆ ಎಂಬುದರ ಬಗ್ಗೆ.

******

**ಉತ್ತರ:** ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 30 ಗ್ರಾಪಂಸಿ 2008, ದಿನಾಂಕ:31.10.2008ರನ್ವಯ ರಾಜ್ಯದಲ್ಲಿನ ಎಲ್ಲಾ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ದಿನಾಂಕ:01.11.2008ರಿಂದ ಅನ್ವಯವಾಗುವಂತೆ ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಯು ತಾವು ಪಡೆಯುತ್ತಿರುವ ಕನಿಷ್ಟ ವೇತನ ಹಾಗೂ ತುಟ್ಟಿಭತ್ಯೆಯ ಶೇಕಡಾ 10ರಷ್ಟು ವಂತಿಗೆಯನ್ನು ನೌಕರರ ವಂತಿಗೆಯಾಗಿ ಪ್ರತಿ ತಿಂಗಳು ಪಾವತಿಸಬೇಕಿರುತ್ತದೆ. ಸಂಬಂಧಿಸಿದ ಗ್ರಾಮ ಪಂಚಾಯಿತಿಯು ಪ್ರತಿ ತಿಂಗಳು ನೌಕರರ ವಂತಿಗೆಗೆ ಸಮವಾದ ಅಂದರೆ, ನೌಕರರ ವೇತನ ಮತ್ತು ತುಟ್ಟಿಭತ್ಯೆಯ ಶೇ.10 ರಷ್ಟು ಮೊತ್ತವನ್ನು ವಂತಿಗೆಯಾಗಿ ಪಾವತಿಸಬೇಕಾಗಿರುತ್ತದೆ.

ಉಡುಪಿ ಜಿಲ್ಲೆಯಲ್ಲಿ ಸಂಪೂರ್ಣವಾಗಿ ಮತ್ತು ದಕ್ಷಿಣ ಕನ್ನಡ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ಕೊಡಗು ಜಿಲ್ಲೆಗಳಲ್ಲಿ ಭಾಗಶಃವಾಗಿ ಈ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಉಳಿದ ಜಿಲ್ಲೆಗಳಲ್ಲಿ ಈ ಯೋಜನೆಯ ಅನುಷ್ಠಾನ ಬಾಕಿಯಿರುತ್ತದೆ.

ಮಂಡ್ಯ, ಮೈಸೂರು ಹಾಗೂ ಹಾಸನ ಸೇರಿದಂತೆ ರಾಜ್ಯದ ಬಹಳಷ್ಟು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ಅನುಷ್ಠಾನ ಮಾಡಲು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ಒದಗಿಸಲು ಸರ್ಕಾರದಿಂದ ನಿರ್ದೇಶನ ನೀಡಲಾಗಿದೆ.

**ಸಂಖ್ಯೆ:**RDPR 1045 GPA 2025

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

ಅನುಬಂಧ-1 ([illegible])

ಘೋಷ್ವಾರೆ.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ರವರ ನಿಯಮ 72 ರ ಗಮನ ಸೆಳೆಯುವ ಸೂಚನೆಗೆ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 30 ಗ್ರಾಪಂಸಿ 2008 ದಿನಾಂಕ: 31-10-2008 ರನ್ವಯ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಸೌಲಭ್ಯವನ್ನು ಒದಗಿಸಿರುವ ಕುರಿತಾದ ಮಾಹಿತಿ

| ಕ್ರ.ಸಂ. | ಜಿಲ್ಲೆ | ಒಟ್ಟು ಗ್ರಾಮ ಪಂಚಾಯಿತಿ ಸಂಖ್ಯೆ | ಅನುಷ್ಠಾನಗೊಳಿಸಿರುವ ಒಟ್ಟು ಗ್ರಾಮ ಪಂಚಾಯಿತಿ ಸಂಖ್ಯೆ | ಅನುಷ್ಠಾನಗೊಳಿಸಲು ಬಾಕಿಯಿರುವ ಒಟ್ಟು ಗ್ರಾಮ ಪಂಚಾಯಿತಿ ಸಂಖ್ಯೆ | ಷರಾ |
|---|---|---|---|---|---|
| 1 | ಬಾಗಲಕೋಟೆ | 196 | 0 | 196 | |
| 2 | ಬಳ್ಳಾರಿ | 100 | 0 | 100 | |
| 3 | ಬೆಳಗಾವಿ | 500 | 0 | 500 | |
| 4 | ಬೆಂಗಳೂರು ನಗರ | 85 | 52 | 33 | |
| 5 | ಬೆಂಗಳೂರು ಗ್ರಾಮಾಂತರ | 101 | 8 | 93 | |
| 6 | ರಾಮನಗರ | 126 | 0 | 126 | |
| 7 | ಬೀದರ್ | 182 | 0 | 182 | |
| 8 | ಚಾಮರಾಜನಗರ | 130 | 0 | 130 | |
| 9 | ಚಿಕ್ಕಬಳ್ಳಾಪುರ | 157 | 0 | 157 | |
| 10 | ಚಿಕ್ಕಮಗಳೂರು | 220 | 0 | 220 | |
| 11 | ಚಿತ್ರದುರ್ಗ | 189 | 0 | 189 | |
| 12 | ದಕ್ಷಿಣ ಕನ್ನಡ | 223 | 57 | 166 | |
| 13 | ದಾವಣಗೆರೆ | 194 | 0 | 194 | |
| 14 | ಧಾರವಾಡ | 146 | 0 | 146 | |
| 15 | ಗದಗ | 122 | 0 | 122 | |
| 16 | ಹಾಸನ | 267 | 0 | 267 | |
| 17 | ಹಾವೇರಿ | 223 | 0 | 223 | |
| 18 | ಕಲಬುರಗಿ | 261 | 0 | 261 | |
| 19 | ಕೊಡಗು | 104 | 2 | 102 | |
| 20 | ಕೋಲಾರ | 154 | 0 | 154 | |
| 21 | ಕೊಪ್ಪಳ | 153 | 0 | 153 | |
| 22 | ಮಂಡ್ಯ | 233 | 0 | 233 | |
| 23 | ಮೈಸೂರು | 256 | 0 | 256 | |
| 24 | ರಾಯಚೂರು | 179 | 0 | 179 | |
| 25 | ಶಿವಮೊಗ್ಗ | 262 | 0 | 262 | |
| 26 | ತುಮಕೂರು | 330 | 0 | 330 | |
| 27 | ಉಡುಪಿ | 155 | 155 | 0 | |
| 28 | ಉತ್ತರ ಕನ್ನಡ | 229 | 0 | 229 | |
| 29 | ವಿಜಯನಗರ | 137 | 0 | 137 | |
| 30 | ವಿಜಯಪುರ | 211 | 0 | 211 | |
| 31 | ಯಾದಗಿರಿ | 122 | 0 | 122 | |
| ಒಟ್ಟು | | 5947 | 274 | 5673 | |

Scanned with CamScanner